ಕೈಗಾ! ಉತ್ತರ ಕನ್ನಡ ಜಿಲ್ಲೆಯಲ್ಲಿ 80ರ ದಶಕದಿಂದ ಹೋರಾಟದ ಕಾವು ಹೆಚ್ಚಿಸಿದ ವಿಷಯ, ವಸ್ತು ಹಾಗೂ ಸ್ಥಳ. ಅಣು ವಿಕಿರಣದಿಂದ ಕ್ಯಾನ್ಸರ್, ಥೈರಾಯಿಡ್‌ನಂಥ ಭೀಕರ ರೋಗಗಳಿಂದ ಸುತ್ತಲಿನ ಜನ ನರಳುತ್ತಿದ್ದಾರೆ. ಈಗಿರುವ 4 ಘಟಕಗಳಿಗೆ ಮತ್ತೆರಡು ಸೇರಿಸಲು ಹೊರಟ ಸರಕಾರದ ನಡೆಗೆ ಜನ ಆಕ್ರೋಶಗೊಂಡಿದ್ದಾರೆ. ಇಂದು ಸ್ವರ್ಣವಲ್ಲೀ ಶ್ರೀಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯುತ್ತಿದೆ.

# ಕೈಗಾಕ್ರೋಶ

**ವಿನುತಾ ಹೆಗಡೆ ಕಾನಗೋಡ** ಶಿರಸಿ

ಕೈಗಾ ಅಣುಸ್ಥಾವರದ ದುಷ್ಪರಿಣಾಮಗಳು ವ್ಯಾಪಕವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಅಣುಸ್ಥಾವರವನ್ನು ಇನ್ನಷ್ಟು ವಿಸ್ತಾರ ಮಾಡುವ 5-6 ನೇ ಘಟಕ ನಿರ್ಮಾಣ ಬೇಡ ಎಂದು ಆಗ್ರಹಿಸಿ ಜೂ.25ರಂದು ಬೆಳಗ್ಗೆ 10:30ಕ್ಕೆ ಯಲ್ಲಾಪುರ ಟಿಎಂಎಸ್ ಸಭಾಂಗಣದಲ್ಲಿ ಬೃಹತ್ ಪರಿಸರ ಸಮಾವೇಶ ಏರ್ಪಟ್ಟಿದೆ.

ಹಸಿರು ಸ್ವಾಮೀಜಿ ಎಂದೇ ಖ್ಯಾತರಾದ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಹೋರಾಟ ಸಮಾವೇಶದ ಸಾನ್ನಿಧ್ಯ ವಹಿಸಲಿದ್ದಾರೆ. ಇಂದು ಪ್ರಮುಖ ನಿರ್ಣಯ ಕೈಗೊಳ್ಳಲಾಗುತ್ತದೆ. ಮಧ್ಯಾಹ್ನ ನಡೆಯುವ ಗೋಷ್ಠಿಗಳಲ್ಲಿ ಕೈಗಾ ಆರೋಗ್ಯ ಸಮೀಕ್ಷೆ, ನೆಲ, ಜಲ, ಜಾನುವಾರು, ವನ್ಯ ಜೀವಿಗಳ ಮೇಲೆ ಅಣುವಿಕಿರಣದ ಪರಿಣಾಮಗಳು. ಕೃಷಿ ಬದುಕಿನ ಮೇಲೆಯಾಗುವ ದುಷ್ಪರಿಣಾಮಗಳು. ಕೈಗಾ ಸುತ್ತಲಿನ ಹಳ್ಳಿಗಳ ಜನರ ಅತಂತ್ರ ಬದುಕಿನ ಪರಿಸ್ಥಿತಿ, ಮುಂತಾದ ಜ್ವಲಂತ ಪರಿಸ್ಥಿತಿ ಬಗ್ಗೆ ಸಮಾಲೋಚನೆ, ವಿಷಯ ಮಂಡನೆ, ಮುಂದಿನ ಕ್ರಮದ ಅನೇಕ ಚರ್ಚೆ ನಡೆಯಲಿದೆ.

ಈಗಾಗಲೇ ಯಲ್ಲಾಪುರ ಶಿರಸಿಗಳಲ್ಲಿ ಸ್ವರ್ಣವಲ್ಲೀ ಸ್ವಾಮೀಜಿ ಅವರ ಅಧ್ಯಕ್ಷತೆಯಲ್ಲಿ ತಯಾರಿ ಸಭೆ ನಡೆದಿವೆ. ವಜ್ರಳ್ಳಿ, ಮಲವಳ್ಳಿ, ಗುಂದ, ಉಮಚಗಿ, ಹೇರೂರು, ಕುಮಟಾ, ಅಂಕೋಲಾ ಮುಂತಾದ ಸ್ಥಳಗಳಲ್ಲಿ ಸಮಾವೇಶ ಪೂರ್ವ ಸಂಪರ್ಕ ಸಭೆಗಳು ನಡೆಯುತ್ತಿದೆ. ಜನ ಸಂಪರ್ಕ ಅಭಿಯಾನ ನಡೆಯುತ್ತಿದೆ.

ಉತ್ತರ ಕನ್ನಡ ಜಿಲ್ಲೆ ಪರಿಸರ ಧಾರಣಾ ಸಾಮರ್ಥ್ಯ ಮುಗಿದಿದೆ ಎಂದು ವಿಜ್ಞಾನಿಗಳು ವರದಿ ನೀಡಿದ್ದಾರೆ. ಕೈಗಾದಿಂದ ಇನ್ನೊಂದು ವಿದ್ಯುತ್ ಮಾರ್ಗ ನಿರ್ಮಾಣವಾದರೆ ಒಂದು ಲಕ್ಷ ಮರಗಳ ನಾಶವಾಗುತ್ತದೆ. ಈ ಹಿಂದೆ 2 ತಂತಿ ಮಾರ್ಗಗಳಿವೆ 2 ಲಕ್ಷ ಮರ ಕಡಿಯಲಾಗಿದೆ. ಸರಕಾರದ ಆರೋಗ್ಯ ಸಮೀಕ್ಷೆ ವರದಿ ಜನತೆಗೆ ತಪ್ಪು ಮಾಹಿತಿ ನೀಡಿದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಕೈಗಾ ಸುತ್ತ ವ್ಯಾಪಕವಾಗಿ ಕ್ಯಾನ್ಸರ್ ಇತ್ಯಾದಿ ಕಾಯಿಲೆಗಳು ಹಬ್ಬಿರುವುದು ಎಲ್ಲರಿಗೆ ತಿಳಿದಿರುವ ಸಂಗತಿ. ಅಣುಸ್ಥಾವರ ಸ್ಥಾಪನೆಗೆ ಮೊದಲೇ 1996-97 ರಲ್ಲಿ ಜಿಲ್ಲಾ ಪರಿಸರ ಸಮಿತಿ ಅವಿನಾಶ ಬೆಂಗಳೂರು ಸಂಸ್ಥೆಗಳು ಆರೋಗ್ಯ ಸಮೀಕ್ಷೆ ನಡೆಸಿದ್ದನ್ನು ಇಲ್ಲಿ ನೆನಪಿಸಬಹುದಾಗಿದೆ.

## ಅರಣ್ಯ ನಾಶ

ಜಿಲ್ಲೆಯ ಯಲ್ಲಾಪುರ ತಾಲೂಕಿನಿಂದ ಬಾರೆ ಮಾರ್ಗವಾಗಿ ರಸ್ತೆ ಅಗಲೀಕರಣ ರಸ್ತೆ ಸುಧಾರಣೆಯ ನೆಪವೊಡ್ಡಿ ಅರಣ್ಯದ ನಾಶಕ್ಕೆ, ಮರಗಳ ಕಡಿತಕ್ಕೆ ಮುಂದಾಗಿದ್ದು, ಅರಣ್ಯ ಇಲಾಖೆ ಹಸಿರು ನಿಶಾನೆ ತೋರಿಸಿದೆ. 4.885 ಹೆಕ್ಟೇರ್ ಅರಣ್ಯ ಪ್ರದೇಶ ರಸ್ತೆ ಅಗಲೀಕರಣಕ್ಕೆ ಬಳಕೆಯಾಗುತ್ತಿದ್ದು, ಅಂದಾಜು 2.56ಕೋಟಿ ರು.ಹಣ ಅರಣ್ಯ ಇಲಾಖೆಯ ಬೊಕ್ಕಸ ಸೇರಲಿದೆ. ಇದಲ್ಲದೆ ರಸ್ತೆ ಅಗಲೀಕರಣಕ್ಕಾಗಿ ಕಡಿಯಲಾದ ಮರಗಳು ಕಿರವತ್ತು ಟಿಂಬರ್ ಡಿಪೋ ಸೇರಲಿದ್ದು ಅಂದಾಜು 1.25.ಕೋಟಿ ರು. ಮತ್ತೆ ಅರಣ್ಯ ಇಲಾಖೆಗೆ ಸೇರಲಿದೆ. ಕೈಗಾ ಮಾರ್ಗವಾಗಿ ಸಿಗುವ ವಜ್ರಳ್ಳಿ, ತೇಲಂಗಾರ್, ಬಾರೆ ಬಾಗದವರೆಗೂ ಈಗಿರುವ ರಸ್ತೆ ಸರಿಯಾಗಿಯೇ ಇದೆ. ಇಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ರಸ್ತೆ ಅಗಲೀಕರಣದ ಅವಶ್ಯಕತೆಯೇ ಇಲ್ಲ. ಅದೂ ಅಲ್ಲದೇ ಬಾರೆ ದಾಟಿ ಮುಂದಿನ ಮಾರ್ಗವಾಗಿ ತೆರಳುವವರು ಕೈಗಾ ಸಿಬ್ಬಂದಿ ಮಾತ್ರ. ಹುಬ್ಬಳ್ಳಿ, ಆಂಧ್ರದಿಂದ ಕೈಗಾಕ್ಕೆ ಸಿಬ್ಬಂದಿ ನಿತ್ಯವೆಂಬಂತೆ ಸಂಚಾರ ಬೆಳೆಸುತ್ತಾರೆ ಅಂದರೆ ಇವರ ಸಲುವಾಗಿ 4.885ಹೆಕ್ಟೇರ್ ಅರಣ್ಯ ನಾಶವಾಗಬೇಕಿದೆ. ಕೈಗಾಕ್ಕೆ, ಅವರ ಸಿಬ್ಬಂದಿ ಸಲುವಾಗಿ ರಸ್ತೆ ಅಗಲೀಕರಣಕ್ಕಾ ಇಷ್ಟುದೊಡ್ಡ ಪ್ರಮಾಣದಲ್ಲಿ ಅರಣ್ಯ ನಾಶವಾಗುವುದಕ್ಕೆ ಅವಕಾಶ ನೀಡಿರುವುದೇ ದುರಂತ.

## ಇಂದು ಸಮಾವೇಶ

**ಯಲ್ಲಾಪುರ:** ಜೂ.25ರಂದು ಭಾನುವಾರ ಬೆಳಗ್ಗೆ 10ಗಂಟೆಗೆ ಯಲ್ಲಾಪುರ ಟಿಎಂಎಸ್‌ನಲ್ಲಿ ಸ್ವರ್ಣವಲ್ಲಿ ಮಠಾಧೀಶ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಈ ಸಮಾರಂಭಕ್ಕೆ ಖ್ಯಾತ ಪರಿಸರ ತಜ್ಞರು, ವಿಜ್ಞಾನಿಗಳಾದ ನಾಗೇಶ ಹೆಗಡೆ, ಡಾ.ಟಿ.ವಿ. ರಾಮಚಂದ್ರ, ವೈ.ಬಿ. ರಾಮಕೃಷ್ಣ, ಶಂಕರ ಶರ್ಮಾ, ಬಿ.ಎಂ. ಕುಮಾರಸ್ವಾಮಿ ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ. ಅಲ್ಲದೇ ನಮ್ಮ ಜಿಲ್ಲೆಯ ಜನಪ್ರತಿನಿಧಿಗಳಾದ ಸಂಸದ ಅನಂತ ಕುಮಾರ ಹೆಗಡೆ, ಶಾಸಕರಾದ ಶಿವರಾಮ ಹೆಬ್ಬಾರ, ವಿಶ್ವೇಶ್ವರ ಹೆಗಡೆ ಕಾಗೇರಿ , ಸತೀಶ ಸೈಲ್, ಶಾರದಾ ಶೆಟ್ಟಿ, ಮಂಕಾಳು ವೈಧ್ಯ, ಶ್ರೀಕಾಂತ ಘೋಟ್ನೆಕರ್ ಅಲ್ಲದೇ ಜಿಪಂ ಅಧ್ಯಕ್ಷರು, ಸದಸ್ಯರು, ತಾಪಂ ಮತ್ತು ಗ್ರಾಪಂನ ಎಲ್ಲ ಜನಪ್ರತಿನಿಧಿಗಳನ್ನು ಸಭೆಯಲ್ಲಿ ಭಾಗವಹಿಸಿ ಅಂದು ಶ್ರೀಗಳು ವೃಕ್ಷಾರೋಪಣಾ ಕಾರ್ಯಕ್ರಮ ನೆಡೆಸಿಕೊಳ್ಳಲಿದ್ದಾರೆ.



1999ರಲ್ಲಿ ಕೈಗಾದಲ್ಲಿ ಪ್ರತಿಭಟನೆ. ಪದ್ಮಶ್ರೀ ಪುರಸ್ಕೃತೆ ಸುಕ್ರಿ ಗೌಡ ಭಾಗಿ.



2011 ರಲ್ಲಿ ಕೈಗಾ 5-6ನೇ ಘಟಕಬೇಡ ಸಭೆ ಎಂದು ಸೋಂದಾದಲ್ಲಿ ನಡೆಸಿದ ಸಭೆ.



1987ರ ಕಾರವಾರದಲ್ಲಿ ಕೈಗಾ ಪ್ರತಿಭಟನೆ.

## ಮಗ್ಧ ಮಣ್ಣಿನ ಮಕ್ಕಳ ಕರುಳ ಕೂಗು

**ದತ್ತಾತ್ರೇಯ ಭಟ್ಟ, ಯಲ್ಲಾಪುರ**

ಉತ್ತರ ಕನ್ನಡದ ಸಹ್ಯಾದ್ರಿಯ ಸಹಜವಾದ ಸೌಂದರ್ಯವೇ ಭವಿಷ್ಯದಲ್ಲಿ ಶಾಪವಾಗುವ ಮೂಲಕ ಬೆಳಕಿನ ತ್ಯಾಗದ ಹಿಂದೆ ಕತ್ತಲು ತುಂಬಿದೆ. ಹೊರ ಜಗತ್ತಿನ ಸಂಪರ್ಕವಿಲ್ಲದೇ ತಮ್ಮದೇಯಾದ ಜಗತ್ತಿನಲ್ಲಿ ವಿಹರಿಸುತ್ತಿರುವವರಿಗೆ ಅರಿವಿಲ್ಲದೇ ಬೃಹತ್ ಅಣುಸ್ಥಾವರದ ದುರಂತ ಕಥಾನಕಗಳು ಅವತರಿಸ ತೊಡಗಿದೆ.

ರಾಜ್ಯದಲ್ಲಿಯ ಏಕೈಕ ಅಣುಸ್ಥಾವರದ ಕೈಗಾದ ಕರುಣಾಜನಕ ಕತೆಗಳು. ಪ್ರವಾಸಿ ತಾಣವಾಗಿ ತನ್ನ ನೈಸರ್ಗಿಕ ಚೆಲುವನ್ನು ಹೊಂದಿ ಪಶ್ಚಿಮ ಘಟ್ಟದ ಅಪರೂಪದ ಜೀವ ವೈವಿಧ್ಯಗಳನ್ನು ತನ್ನೊಡಲಲ್ಲಿ ಇರಿಸಿಕೊಂಡ ಉತ್ತರ ಕನ್ನಡ ನೀ ತೀಡಡ ಎನ್ನುವಷ್ಟರ ಮಟ್ಟಿಗೆ ಬಡವಾಗಿದೆ. ಸತತ ಮೂರು ವರ್ಷಗಳ ಬರಗಾಲದ ಬವಣೆಗೆ ಸಿಲುಕಿದ ಮಲೆನಾಡಿನ ಇಲ್ಲಿಯ ಪ್ರದೇಶಗಳು ಮತ್ತೆ ಮತ್ತೆ ಜಗತ್ತಿನ ನೋವಿನ ಸಂಗತಿಗಳಿಗೆ ಸಾಕ್ಷಿಯಾಗುತ್ತಾರೆಂದರೆ ಯಾರು ತಾನೇ ಸಹಿಸಿಯಾರು ? ಕಾಣದ ಯಾತನೆಯ ವಿವಿಧ ಮುಖ ಹೊತ್ತ ಆಕಸ್ಮಿಕ ಮರಣಗಳ ಕಾನ್ಸರ್, ಥೈರಾಯಿಡ್ ನಂತಹ ರೋಗ ಬಾಧಿತ ಪ್ರದೇಶವಾಗಿ ಕುರೂಪ ಸನ್ನಿವೇಶಗಳಿಗೆ ಬಲಿಯಾಗುವ ಮುನ್ನ ಕೈಗಾದ ಐದು ಮತ್ತು ಆರನೇ ಘಟಕದ ಅವತಾರಕ್ಕೆ ತಿಲಾಂಜಲಿ ಇಡುವ ಸಂಕಲ್ಪ ಹೊತ್ತು ಹೋರಾಟದ ಹಾದಿ ಹಿಡಿದಿದೆ.

ಇಂದು ಯಲ್ಲಾಪುರದಲ್ಲಿ ಸ್ವರ್ಣವಲ್ಲಿ ಸ್ವಾಮೀಜಿಯವರ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಪರಿಸರವಾದಿಗಳು, ಪರಿಸರ ತಜ್ಞ ವಿಜ್ಞಾನಿಗಳ ವಿಚಾರಗಳೊಂದಿಗೆ ಹಮ್ಮಿಕೊಂಡ ಕೈಗಾ ಪ್ರತಿಭಟನಾ ಸಮಾವೇಶ ಭವಿಷ್ಯತ್ತಿನ ಜೀವ ವೈವಿಧ್ಯ ಮತ್ತು ಮನು ಕುಲದ ವಿನಾಶದಂಚಿನನ್ನು ತಪ್ಪಿಸುವ, ಮನುಷ್ಯತ್ವದ ಅವಲೋಕನಕ್ಕೆ ವೇದಿಕೆಯಾಗಿ ತನ್ನ ಚಿಂತನೆ, ಅವಲೋಕನದೊಂದಿಗೆ ಭವಿಷ್ಯದ ನಿರ್ಣಯಕ್ಕೆ ಬರಬೇಕಿದೆ.

ಕಾರವಾರ ಜಿಲ್ಲಾ ಕೇಂದ್ರದಿಂದ ಸಮೀಪದಲ್ಲಿರುವ ದೇಶದಲ್ಲಿ ಐದನೇ ಅಣುಸ್ಥಾವರವಾಗಿರುವ ಈ ಕೈಗಾ ಅಣು ವಿದ್ಯುತ್ ಉತ್ಪಾದನಾ ಕೇಂದ್ರ 1986ರಲ್ಲಿ ಸ್ಥಾಪನೆಗೊಂಡು ಪರಿಸರ ಹೋರಾಟದ ನಡುವೆಯೂ ಇಂದು ನಾಲ್ಕು ಘಟಕಗಳು ಕಾರ್ಯ ನಿರ್ವಹಿಸುತ್ತಿದೆ. ದಟ್ಟ ಹಸುರಿನ ಬೆಟ್ಟ ಗುಡ್ಡಗಳ ಇಳಿಜಾರಿನ ಕಾಳಿ ಕಣಿವೆಯಲ್ಲಿನ ಕಾಳಿ ನದಿಯ ಕದ್ರಾ ಡ್ಯಾಂನ ದಂಡೆಯಲ್ಲಿರುವ ಕೈಗಾ ಅಣುಸ್ಥಾವರ ಭಯಾನಕವಾದ ಯೋಜನೆಯಾಗಿ ತನ್ನ ಶಕ್ತಿ ಕೇಂದ್ರದ ಪ್ರಭಾವವನ್ನು ಪ್ರಚುರಪಡಿಸುತ್ತಿದೆ.

ಸರಿಯಾದ ವ್ಯವಸ್ಥೆಗಳಲ್ಲಿ ಬದುಕಲಾಗದ ಹೀನಾಯ ನೋವು ಅನುಭವಿಸಿ ಪತ್ತೆಯಾಗದ ರೋಗದ ಅವತಾರಕ್ಕೆ ಮನುಷ್ಯರ ಬದುಕು ಬಲಿಯಾಗುವ ಆತಂಕ ದಿಂದಲೇ ಜ್ಞಾನಪೀಠ ಸಾಹಿತಿ ಶಿವರಾಮ ಕಾರಂತ, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್ ದೊರೆಸ್ವಾಮಿ, ಸ್ನೇಹ ಕುಂಜದ ಕುಸುಮಾ ಸೊರಬರು ಕೈಗಾ ಚಳುವಳಿಯ ಮೊದಲ ಹೋರಾಟದ ನಾಯಕರಾಗಿದ್ದರು.

ಪಾದಯಾತ್ರೆಯ ಮೂಲಕ ಜನ ಸಂಘಟಿಸಿ ಮುಂದಿನ ದಿನಗಳಲ್ಲಿ ಅಣು ವಿಕೀರಣದ ಕೈಗಾದಿಂದಾಗುವ ಅನಾಹುತಗಳ ಬಗೆಗೆ ಎಚ್ಚರಿಸಿದ್ದರು. ಸ್ಥಳೀಯ ಜನರ ಆರೋಗ್ಯ ಸಮೀಕ್ಷಗೆ ಒತ್ತಾಯಿಸಿದ್ದರು. ಪರಿಸರಕ್ಕೆ ಅನುಕೂಲಕರವಾದ ಜೈವಿಕ, ಸೋಲಾರ್, ಗಾಳಿ ಯಂತ್ರದಿಂದ ಪಡೆಯುವ ಪರ್ಯಾಯ ಶಕ್ತಿ ಇಂಧನಗಳ ಬಗೆಗೆ ಒತ್ತು ನೀಡಿ ಮಾರಕವಾದ ಕೈಗಾ ಯೋಜನೆ ಕೈ ಬಿಡಿ ಎಂದು ದೇಶವೆ ಗಮನಿಸುವ ಹಾಗೆ ಒಕ್ಕರೊಲ ಧ್ವನಿಯನ್ನು ಮೊಳಗಿಸಿದ್ದರು.

> ಕೈಗಾದ ಐದು ಮತ್ತು ಆರು ಘಟಕವನ್ನು ಶಾಶ್ವತವಾಗಿ ತಡೆ ಹಿಡಿಯುವ ಬೇಡಿಕೆ ಈ ಪರಿಸರ ಸಮಾವೇಶದ ಆಶಯವಾಗಿದೆ. ಹಿಂದುಳಿದ ಭಾಗಗಳ ಅಭಿವೃದ್ಧಿಗೆ ಪರಿಣಾಮಕಾರಿಯಾದ ಪರಿಹಾರದ ಭರವಸೆಯನ್ನು ಈ ಯೋಜನೆಯಿಂದ ನಿರೀಕ್ಷಿಸಲಾಗುತ್ತದೆ. ಮಾನವೀಯ ಕಾಳಜಿ ಇಂತಹ ಸಂದರ್ಭದಲ್ಲಿ ಚರ್ಚೆಗೆ ಒಳಪಡದಿದ್ದರೆ ಮುಂದಿನ ದಿನಗಳಲ್ಲಿ ಅಪಾರವಾದ ಅಪಾಯದ ಕ್ಷಣಗಳಿಗೆ ಸಾಕ್ಷಿಯಾಗಬೇಕಾಗುತ್ತದೆ. ನಮ್ಮ ಸಮಾಜದ ಅಪಾಯಕರ ಸಂಗತಿಗಳ ಕುರಿತಾಗಿ ಗಂಭೀರವಾಗಿ ಯೋಚಿಸುವ ಕಾಲ ಸನ್ನಿತವಾಗಿದೆ. ಕೈಗಾದ ಅಣು ವಿಕಿರಣದ ಪ್ರಭಾವದ ಬಗೆಗೆ ಮುಕ್ತವಾದ ಸಾರ್ವಜನಿಕ ಚರ್ಚೆಯಾಗಲಿ.
>
> **- ಡಾ ರವಿ ಭಟ್ಟ ಬರಗದ್ದೆ,** ಪರಿಸರ ಸಂಘಟಕರು

## ಇತಿಹಾಸದ ಪುಟದಲ್ಲಿ ಹೋರಾಟ

1980ರ ದಶಕದಲ್ಲಿ ಕಾರವಾರ ಸಮೀಪದ ಕೈಗಾದಲ್ಲಿ ಅಣು ಸ್ಥಾವರ ಸ್ಥಾಪನೆಯ ವಿರುದ್ಧ ಬಹು ದೀರ್ಘ ಜನ ಚಳುವಳಿ ನಡೆದಿದ್ದು, ಡಾ. ಶಿವರಾಮ ಕಾರಂತರಿಂದ ಹಿಡಿದು ಪೂಜ್ಯ ಪೇಜಾವರ ಸ್ವಾಮೀಜಿಯವರೆಗೆ ಗಣ್ಯ ಅನೇಕರು ಕೈಗಾ ಚಳವಳಿಯಲ್ಲಿ ಪಾಲ್ಗೊಂಡಿದ್ದರು. 1989ರಲ್ಲಿ ಡಾ. ಶಿವರಾಂ ಕಾರಂತರನ್ನು ಹಸಿರು ಅಭ್ಯರ್ಥಿ ಎಂದು ಚುನಾವಣೆಗೆ ನಿಲ್ಲಿಸುವ ಮಟ್ಟಕ್ಕೆ ಕೈಗಾ ಚಳವಳಿ ಮಹತ್ವ ಪಡೆದುಕೊಂಡಿತ್ತು. ವರ್ಷಗಟ್ಟಲೇ ಸತ್ಯಾಗ್ರಹ ನಡೆಸಿದರು. ಕೋರ್ಟ್ ಕಟ್ಟೆ ಹತ್ತಿದರು. ಸಾವಿರ ಸಂಖ್ಯೆಯಲ್ಲಿ ಯುವಕ-ಯುವತಿಯರು ಕೈಗಾ ಹೋರಾಟದಲ್ಲಿ ಭಾಗವಹಿಸಿದ್ದರು. ಅನಂತರ 1994ರಲ್ಲಿ ಡೂಮ್ ಬಿತ್ತು, ಕೈಗಾದ ಒಂದು ಡೂಮ್ ಕುಸಿದು ಬಿದ್ದಾಗ ಪುನಃ ಚಳವಳಿ ಭುಗಿಲೆದ್ದಿತು.

1997-98ರಲ್ಲಿ ಕೈಗಾ ಸುತ್ತಲಿನ 25 ಕಿಮೀ ಸುತ್ತಲಿನ ಹಳ್ಳಿಗಳ ಜನತೆಯ ಆರೋಗ್ಯ ಸಮೀಕ್ಷೆಯನ್ನು ಉತ್ತರ ಕನ್ನಡ ಪರಿಸರ ಸಮಿತಿ ಮತ್ತು ಅವಿನಾಶ ಸಂಘಟನೆ ಜಂಟಿಯಾಗಿ ನಡೆಸಿದೆವು. ಇದೊಂದು ದೇಶದಲ್ಲೇ ಅನನ್ಯವಾದ ಸಮೀಕ್ಷೆಯಾಗಿ ಸ್ಥಾನಿಕರೇ ಮುಂದಾಗಿ ನಡೆಸಿದ್ದ ಅಧ್ಯಯನ ಎನಿಸಿಕೊಂಡಿತು.

1999ರಲ್ಲಿ ಕೈಗಾದಲ್ಲಿ ವಿದ್ಯುತ್ ಉತ್ಪಾದನೆ ಆರಂಭ ಮಾಡುವ ಹೊತ್ತಿನಲ್ಲೂ ಪ್ರತಿಭಟನೆ ನಡೆದದ್ದು ವಿಶೇಷ. ಈ ಮಧ್ಯೆ ಕೈಗಾದಿಂದ ಶಿರಸಿ ಮಾರ್ಗವಾಗಿ ಬೃಹತ್ ವಿದ್ಯುತ್ ತಂತಿ ಮಾರ್ಗ ನಿರ್ಮಿಸುವ ಸಂದರ್ಭದಲ್ಲಿ ಲಕ್ಷ ಮರಗಳ ಕಟಾವು ವಿರೋಧಿಸಿ ಶಿರಸಿಯ ವಾನಳ್ಳಿ ಅರಣ್ಯ ಮಧ್ಯೆ ಚಳುವಳಿ, ಅನಂತರ 2001ರಲ್ಲಿ ಕೈಗಾದಿಂದ ಧಾರವಾಡವರೆಗೆ ನಿರ್ಮಿಸುವ ಬೃಹತ್ ತಂತಿಮಾರ್ಗ ವಿಷಯದಲ್ಲಿ ಪ್ರತಿಭಟನೆ ಯಲ್ಲಾಪುರ ಅರಣ್ಯ ಪ್ರದೇಶಲ್ಲೇ ನಡೆಯಿತು. ಈ ಮಧ್ಯೆ ಕೈಗಾದ 3 ಮತ್ತು 4ನೇ ಘಟಕಗಳು ಸದ್ದಿಲ್ಲದೇ, ಕಾರ್ಯಾರಂಭ ಮಾಡಿದವು.

2010ರಲ್ಲಿ ಪುನಃ ಕೈಗಾ ವಿವಾದ ಕೇಂದ್ರವಾಯಿತು. ಒಬ್ಬ ವಿಜ್ಞಾನಿ ಕಣ್ಮರೆಯಾಗಿದ್ದು ನಿಗೂಢವಾಗಿ ಉಳಿದುಕೊಂಡಿತು. ಟ್ರೇಷಿಯಂನಂಥ ವಿಕಿರಣಕಾರಕ ಧಾತು ಕುಡಿಯುವ ನೀರಿಗೆ ಮಿಶ್ರಣವಾಗಿರುವ ಘಟನೆ ದೇಶ ಮಟ್ಟದಲ್ಲಿ ಗಂಭಿರ ಎನಿಸಿಕೊಂಡರೂ ಸತ್ಯ ಹೊರಬರಲೇ ಇಲ್ಲ.

ಅಣು ಸ್ಥಾವರ ಸುತ್ತಲಿನ ಬಾರೆ, ಮಲವಳ್ಳಿ, ಕಳಚೆ ಹಳ್ಳಿಗಳ ಪ್ರದೇಶದಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗಿದೆ ಎಂಬ ಮಾಹಿತಿ ಯಲ್ಲಾಪುರ ತಾಲೂಕಿನ ಹಳ್ಳಿಗಳ ಜನರ ನಿದ್ದೆಗೆಡಿಸಿದೆ. ಜೂನ್ 2010ರಲ್ಲಿ ವಜ್ರಳ್ಳಿ ಪ್ರದೇಶದಲ್ಲಿ ಆರೋಗ್ಯ ಇಲಾಖೆಯ ಮಾಹಿತಿ ಸಂಗ್ರಹ ಶುರುವಾಯಿತು. ಕಾರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ (2011ರ ಮಾ.8) ಪಶ್ಚಿಮಘಟ್ಟ ಕಾರ್ಯಪಡೆ, ಸ್ಥಾನಿಕ ಜನ ಪ್ರತಿನಿಧಿಗಳು. ಆರೋಗ್ಯ ಇಲಾಖೆ, ಕೈಗಾ ಅಣು ಸ್ಥಾವರದವರು ಮಣಿಪಾಲ ಆಸ್ಪತ್ರೆ ಮುಂತಾದವರು ಸಭೆ ನಡೆಸಿದರು. ಕ್ಯಾನ್ಸರ್ ರೋಗಿಗಳ ಸಂಖ್ಯೆ ಕೈಗಾ ಪ್ರದೇಶದಲ್ಲಿ ಹೆಚ್ಚಾಗಿದೆಯೆ ಎಂಬ ಪ್ರಶ್ನೆ ಬಗ್ಗೆ ಸಮಾಲೋಚನೆ ನಡೆಸಿದರು.

2011ರ ಮಾರ್ಚ್ 2ನೇ ವಾರ ಜಪಾನ್ ಭೂಕಂಪ-ಸುನಾಮಿ ಅಣುಸ್ಥಾವರ ಸ್ಫೋಟಗಳ ಘಟನೆ ಉಕ ಜಿಲ್ಲೆಯ ಜನರಿಗೆ ನಡುಕವನ್ನೇ ಹುಟ್ಟಿಸಿತು.

2011ರ ಏಪ್ರಿಲ್ 8ರಂದು ಕೈಗಾ ಅಣುಸ್ಥಾವರದ 3ನೇ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡ ಘಟನೆ, 3ನೇ ಘಟಕವನ್ನು ಬಂದ್ ಮಾಡಿದ ವಿಷಯ ಜಿಲ್ಲೆಯ ಜನತೆಗೆ ಗಾಬರಿ ಉಂಟು ಮಾಡಿತು.

ಉತ್ತರ ಕನ್ನಡ ಜಿಲ್ಲೆಯ ಪರಿಸರ ಸಂಘಟನೆಗಳು 2011 ಏ.10ರಂದು ಶಿರಸಿಯಲ್ಲಿ ತುರ್ತುಸಭೆ ನಡೆಸಿದರು. ಹಸಿರು ಸ್ವಾಮೀಜಿ ಎಂಬ ಹೆಸರು ಮಾಡಿರುವ ಸೋಂದಾ ಸ್ವರ್ಣವಲ್ಲೀ ಸ್ವಾಮೀಜಿ ತೀವ್ರ ಕಳವಳ ವ್ಯಕ್ತ ಮಾಡಿ ಕೈಗಾ ಸ್ಥಾವರದವರು ನಾಗರಿಕ ಸುರಕ್ಷಾ ಸಮಿತಿ ರಚಿಸಬೇಕು ಎಂದು ಒತ್ತಾಯಿಸಿದರು.

ಇತ್ತೀಚೆಗೆ ಗೋವಾ ರಾಜ್ಯದವರು ಸಹಾ ಕೈಗಾ ಅಣುಸ್ಥಾವರದ ಸುರಕ್ಷಿತತೆ ಬಗ್ಗೆ ಆತಂಕ ವ್ಯಕ್ತಿ ಮಾಡಿದ್ದಾರೆ. ನೇರ ದುಷ್ಪರಿಣಾಮಗಳು ಸಮೀಪದಲ್ಲಿರವ ಗೋವಾ ರಾಜ್ಯದ ಹಳ್ಳಿಗಳಿಗೆ ತಟ್ಟಬಹುದು. ಎಂಬ ಆತಂಕವನ್ನು ಗೋವಾದ ಪರಿಸರ ಸಂಸ್ಥೆಗಳು ಎತ್ತಿವೆ.

2011ರ ಏ.23ರಂದು ಶಿರಸಿಯಲ್ಲಿ ಕೈಗಾ ಸಮಸ್ಯೆ ಮುಂದಿಟ್ಟು ಹಕ್ಕೊತ್ತಾಯ ಸಮಾವೇಶ ನಡೆಯಿತು. ಕಾರವಾರದಲ್ಲಿ 2012ರ ಜನವರಿಯಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪಶ್ಚಿಮಘಟ್ಟ ಕಾರ್ಯಪಡೆ ಕೈಗಾ ಅಧಿಕಾರಿಗಳ ಜತೆ ಸಭೆ ನಡೆಸಿತು. ಜಂಟಿ ಸುರಕ್ಷಾ ಸಮಿತಿ ರಚನೆಗೆ ಕೈಗಾ ಸ್ಥಾವರದವರು ಒಪ್ಪಿಗೆ ನೀಡಿದರು.

2011ರ ಡಿ.24ರಂದು ಶಿರಸಿಗೆ ಬಂದ ರಾಜ್ಯಮುಖ್ಯಮಂತ್ರಿಗಳಿಗೆ ಪರಿಸರ ಸಮಿತಿಯ ತಂಡ ಹಕ್ಕೊತ್ತಾಯ ಸಲ್ಲಿಸಿತು. ಬನವಾಸಿ ಕದಂಬೋತ್ಸವಲ್ಲಿ ವಿಷಯ ಪ್ರಸ್ತಾಪ ಆಯಿತು. ಕೈಗಾ-ಕ್ಯಾನ್ಸರ್ ಬಗ್ಗೆ ಅಧ್ಯಯನಕ್ಕೆ ಅಗ್ರಹ ಮಾಡಿತು. ಡಿ.24 2011 ರಂದೇ ಕೈಗಾ ಅಧಿಕಾರಿಗಳಿಗೆ ಕೈಗಾ ಕ್ಯಾನ್ಸರ್ ವಿಷಯದಲ್ಲಿ ಉನ್ನತ ಅಧ್ಯಯನಕ್ಕೆ ಮುಖ್ಯಮಂತ್ರಿಗಳು ಆದೇಶಿಸಿದರು.

ಕೈಗಾ ಅಣುಸ್ಥಾವರ ಸುತ್ತಲಿನ 5 ಕಿಮೀ ವ್ಯಾಪ್ತಿಯ ಹಳ್ಳಿಗಳ ಜನರನ್ನು ಪುನರ್ ವಸತಿ ಮಾಡಿ ಎಂದು ಕಾರವಾರದಲ್ಲಿ ಸತ್ಯಾಗ್ರಹ ನಡೆದಿದೆ. (ಫೆಬ್ರವರಿ-ಮಾರ್ಚ 2011)

2012 ಮಾರ್ಚ್‌ನಲ್ಲಿ ಯಲ್ಲಾಪುರದಲ್ಲಿ ಕೈಗಾ ಅಣುಸ್ಥಾವರದವರ ಜತೆ ಪರಿಸರ ತಜ್ಞರು ಮುಕ್ತ ಸಂವಾದ ನಡೆಸಿದರು. ಪರಿಸರ ಕಾರ್ಯಕರ್ತರ ಗಂಭೀರ ಪ್ರಶ್ನೆಗಳಿಗೆ ಕೈಗಾದ ಉನ್ನತ ಅಧಿಕಾರಿಗಳಿಂದ ಉತ್ತರ ಸಿಗಲಿಲ್ಲ.

2012ರ ಮಾರ್ಚ್ 6ರಂದು ವಜ್ರಳ್ಳಿಯಲ್ಲಿ ಕೈಗಾ ಸುತ್ತಲಿನ ಹಳ್ಳಿಗಳ ಜನತೆ ಸಮಾವೇಶ ನಡೆಸಿ ಜನತೆ ರೋಗಗಳಿಂದ ತತ್ತರಿಸಿರುವ ಬಗ್ಗೆ ಸರಕಾರದ ಗಮನ ಸೆಳೆದರು.

2015ರಲ್ಲಿ ಮುಂಬೈ ಟಾಟಾ ಕ್ಯಾನ್ಸರ್ ಸಂಶೋಧನಾ ಸಂಸ್ಥೆ ಆರಂಭಿಕ ವರದಿ ನೀಡಿತು. 2017ರವರಗೆ ಅಂತಿಮ ವರದಿ ನೀಡಿಲ್ಲ.

ಇದೀಗ ಕೈಗಾ 5-6 ನೇ ಅಣು ಘಟಕ ನಿರ್ಮಾಣಕ್ಕೆ ತಯಾರಿ ನಡೆದಿದೆ. ಈಗಲಾದರೂ ಎಚ್ಚೆತ್ತುಕೊಳ್ಳೋಣ.

ಕಾರವಾರದಲ್ಲಿ ಜನವರಿ 2012ರಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪಶ್ಚಿಮಘಟ್ಟ ಕಾರ್ಯಪಡೆ ಕೈಗಾ ಅಧಿಕಾರಿಗಳ ಜತೆ ಸಭೆ ನಡೆಸಿತು.